| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 1564/2023**

ಪಿಡ್ಬ್ಲೂಃ 9 ಸಿಡ್ಲ್ಯೂಃ 19

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಅನಿಲ್ ಕುಮಾರ್ |
| ತಂದೆಯ ಹೆಸರು | ಃ | ಗೋಪಾಲ್ ಶೆಟ್ಟಿ |
| ಪ್ರಾಯ | ಃ | 46 ವರ್ಷ |
| ಉದ್ಯೋಗ | ಃ | ನೀರು ಸರಬರಾಜು ಸಹಾಯಕ ಪುರಸಭೆ ಕಾರ್ಕಳ |
| ವಾಸ | ಃ | ಕಾರ್ಕಳ |

ದಿನಾಂಕ 14.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ನೋಡಿ ಗುರುತಿಸಿದ್ದೇನೆ.

ಚಾಸಾ-1 ರಿಂದ 4 ರವರ ಪರಿಚಯ ಇದೆ.

ದಿಃ27.10.2021 ರಿಂದ 08.11.2021 ರವರೆಗೆ ಹಗಲು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ರಾತ್ರಿ ಸಮಯದಲ್ಲಿ ಆರೋಪಿ ಮತ್ತು ಚಾಸಾ-20 ಕರ್ತವ್ಯದಲ್ಲಿ ಇದ್ದರು. ನಾನು ಕರ್ತವ್ಯಕ್ಕೆ ಹೋಗಿದ್ದಾಗ ಅಲ್ಲಿ ಸಂಗ್ರಹಿಸಿದ್ದ ಗೇಟುಗಳನ್ನು ನೋಡಿರುತ್ತೇನೆ. ಸದ್ರಿ ಗೇಟುಗಳನ್ನು ಯಾರು ಬ್ರಿಡ್ಜ್ ನ ಅಡಿಯಲ್ಲಿ ಇಟ್ಟಿದ್ದಾರೆ ಎಂದು ಗೊತ್ತಿಲ್ಲ. ಸ್ವಲ್ಪ ದಿನಗಳ ಬಳಿಕ ಸದ್ರಿ ಗೇಟುಗಳು ಕಳುವಾಗಿದೆ ಎಂದು ಚಾಸಾ-1 ರವರು ಹೇಳಿರುತ್ತಾರೆ. ಎಷ್ಟು ಗೇಟು ಕಳುವಾಗಿದೆ ಎಂದು ಗೊತ್ತಿಲ್ಲ. ಚಾಸಾ-1 ರವರು ಆರೋಪಿ ಗೇಟನ್ನು ಕಳ್ಳತನ ಮಾಡಿದ್ದಾರೆ

ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಚಾಸಾ-1 ರವರು ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನಿಪಿ-7 ರಿಂದ 9 ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಪಿ ಎ ಎಸ್ ವಕೀಲರಿಂದಃ

2014 ರಿಂದ ಮುಂಡ್ಲಿಯ ಅಣೆಕಟ್ಟಿನ ಗೇಟುಗಳನ್ನು ಅಳವಡಿಸಲು ಮತ್ತು ತೆಗೆಯಲು ಜಿ ವಿ ಆರ್ ಪವರ್ ಪ್ಲಾಂಟ್ ನವರಿಗೆ ಪುರಸಭೆಯವರು ವಹಿಸಿಕೊಟ್ಟಿತ್ತಾರೆ ಎಂದರೆ ಸರಿ. ಅವರು ವಿದ್ಯುತ್ ಸ್ವಯಂ ಚಾಲಿತ ಗೇಟು ಗಳನ್ನು ಅಳವಡಿಸಿರುತ್ತಾರೆ. ಆ ಕಾರಣದಿಂದ ಮ್ಯಾನುವಲ್ ಆಗಿ ಗೇಟುಗಳನ್ನು ಹಾಕುವ ತೆಗೆಯುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ. ಚಾಸಾ-7 ರವರಿಗೆ ಸದ್ರಿ ಗೇಟುಗಳನ್ನು ಅಳವಡಿಸಲು ಮತ್ತು ತೆಗೆಯಲು ವತ್ತು ಸ್ಟಾಕ್ ಇಡಲು ವಹಿಸಿಕೊಟ್ಟಿರುವುದಿಲ್ಲ. ಒಂದು ವೇಳೆ ಆ ರೀತಿ ವಹಿಸಿಕೊಟ್ಟಿದ್ದರೆ ನನಗೆ ಗೊತ್ತಾಗುತ್ತಿತ್ತು. ಹಳೆ ಗೇಟುಗಳು ಏನಾಗಿದೆ ಎಂದು ನನಗೆ ವೈಯುಕ್ತಿಕವಾಗಿ ಗೊತ್ತಿಲ್ಲ.

ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಮತ್ತು ಚಾಸಾ-7 ರವರಿಗೆ ಸದ್ರಿ ಗೇಟುಗಳನ್ನು ಅಳವಡಿಸಲು ಮತ್ತು ತೆಗೆಯಲು ಮತ್ತು ಸ್ಟಾಕ್ ಇಡಲು ವಹಿಸಿಕೊಟ್ಟಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತೇನೆ. ಅದೇ ರೀತಿ ಜಿ ವಿ ಆರ್ ಪವರ್ ಪ್ಲಾಂಟ್ ನವರು ಗೇಟುಗಳನ್ನು 2021 ರ ಮೊದಲೆ ಅಳವಡಿಸಿರುವುದರಿಂದ ಪುರಸಭೆಗೆ ಸಂಬಧಿಸಿದ 160 ಸಂಖ್ಯೆ ಅಥವಾ 110 ಸಂಖ್ಯೆಯ ಕಬ್ಬಿಣದ ಎಂ ಎಸ್ ಗೇಟುಗಳನ್ನು ಕಿರು ಅಣೆಕಟ್ಟಿಗೆ ಅಳವಡಿಸುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿಕೆ ನೀಡಿರುತ್ತೇನೆ. ಚಾಸಾ-1 ರವರು ಯಾಕೆ ದೂರನ್ನು ನೀಡಿದ್ದಾರೆ ಎಂದು ಗೊತ್ತಿಲ್ಲ. ಒಂದು ವೇಳೆ ಗೇಟು ಗಳು ಅಲ್ಲಿ ಇದ್ದಿದ್ದರೆ ನಾನು ಅಲ್ಲಿ ಕರ್ತವ್ಯದಲ್ಲಿ ಇದ್ದ ಕಾರಣ ನನ್ನ ಗಮನಕ್ಕೆ ಬರುತ್ತಿತ್ತು. ದಿಃ27.10.2021 ರಿಂದ 08.11.2021 ರವರೆಗೆ ಚಾಸಾ-7 ಗೇಟುಗಳನ್ನು ತೆಗೆದ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ. ದಿಃ 06.06.2021 ರಿಂದ 14.06.2021 ರವರೆಗೆ ಚಾಸಾ-7 ರವರು ಗೇಟಗಳನ್ನು ತೆಗೆದು ಸ್ಟಾಕ್ ಇಟ್ಟ ಬಗ್ಗೆ ಮಾಹಿತಿ ಇಲ್ಲ. ಚಾಸಾ-1 ರವರು ನಮ್ಮ ಹಿರಿಯ ಅಧಿಕಾರಿಯಾದ ಕಾರಣ ಅವರು ಹೇಳಿದ್ದನ್ನು ನಾನು ನಂಬಿರುತ್ತೇನೆ. ಒಂದು ವೇಳೆ

ನಿಜವಾಗಿ ಕಳ್ಳತನವಾಗಿದ್ದಲ್ಲಿ ನನ್ನ ಗಮನಕ್ಕೆ ಬರುತ್ತಿತ್ತು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೆ ಘಟನೆ ನಡೆದಿಲ್ಲ , ಚಾಸಾ-1 ರವರು ನೀಡಿದ ದೂರನ್ನು ನೋಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ